ಬೆಳಗಾವಿ ಜಿಲ್ಲೆಯ ಕಬ್ಬು ಅಭಿವೃದ್ಧಿಗೋಸ್ಕರ ವಸೂಲಿ ಮಾಡಿದ ಕರ

196 - ಶ್ರೀ ಉಮೇಶ ಕತ್ತಿ (ಹುಕ್ಕೇರಿ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಸರ್ಕಾರ ಕಬ್ಬು ಅಭಿವೃದ್ಧಿಗೋಸ್ಕರ ಕಬ್ಬು ಅಭಿವೃದ್ಧಿ ಕರವನ್ನು ರೈತರಿಂದ ವಸೂಲಿ ಮಾಡುತ್ತಿದೆಯೇ? ಹಾಗಿದ್ದಲ್ಲಿ ಯಾವ ವರ್ಷದಿಂದ ಈ ಯೋಜನೆ ತರಲಾಯಿತು?

ಆ) ಕಬ್ಬು ಅಭಿವೃದ್ಧಿಗೋಸ್ಕರ ವಸೂಲಿ ಮಾಡಿದ ಕರದ ಮೊತ್ತವೆಷ್ಟು?

ಇ) ಬೆಳಗಾವಿ ಜಿಲ್ಲೆಯಲ್ಲಿ ಕಬ್ಬು ಅಭಿವೃದ್ಧಿಗೋಸ್ಕರ ಖರ್ಚು ಮಾಡಿದ ಹಣವೆಷ್ಟು?

ಶ್ರೀ ಎಸ್.ಬಂಗಾರಪ್ಪ (ಮುಖ್ಯ ಮಂತ್ರಿಗಳು) :

ಅ) ಕಬ್ಬು ಅಭಿವೃದ್ಧಿಗೋಸ್ಕರ ರೈತರಿಂದ ಕಬ್ಬು ಅಭಿವೃದ್ಧಿ ಕರ ಯಾವುದನ್ನೂ ರಾಜ್ಯ ಸರ್ಕಾರ ವಸೂಲು ಮಾಡುತ್ತಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಪ್ರಶ್ನೆ 'ಅ' ಗೆ ಸಂಬಂಧಿಸಿದಂತೆ ಈ ಪ್ರಶ್ನೆ ಅನ್ವಯಿಸುವುದಿಲ್ಲ.

ಚಿಕ್ಕೋಡಿ ಹತ್ತರಕಿ ರಸ್ತೆಯಲ್ಲಿ ಹಿರಣ್ಯ ಕೇಶಿ ನದಿಗೆ ಅಡ್ಡವಾಗಿರುವ ಸೇತುವೆ ಶಿಥಿಲಗೊಂಡಿರುವುದರ ಬಗ್ಗೆ

200 - ಶ್ರೀ ಉಮೇಶ ಕತ್ತಿ (ಹುಕ್ಕೇರಿ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಚಿಕ್ಕೋಡಿ - ಹತ್ತರಕಿ ರಸ್ತೆಯಲ್ಲಿ ಹಿರಣ್ಯಕೇಶಿ ನದಿಗೆ ಅಡ್ಡವಾಗಿರುವ ಸೇತುವೆ ಶಿಥಲಗೊಂಡಿರುವುದು ಮತ್ತು ಮಳೆಗಾಲದಲ್ಲಿ ಮುಚ್ಚಿಹೋಗುತ್ತದೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ಸೇತುವೆಯ ಎತ್ತರ ಹೆಚ್ಚಿಸಿ ಜನರಿಗೆ ಅನುಕೂಲ ಮಾಡಿಕೊಡುವ ಬಗ್ಗೆ ಸರ್ಕಾರದವರು ಕ್ರಮ ಕೈಗೊಳ್ಳುವರೇ?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :

ಅ) ಈ ಸೇತುವೆ ಶಿಥಿಲಗೊಂಡಿರುವುದಿಲ್ಲ. ಆದರೆ ಈ ಸೇತುವೆಯು ಕೆಳಮಟ್ಟದ ಸೇತುವೆ (ಕಾಸವೇ) ಆಗಿದ್ದು ಮಳೆಗಾಲದಲ್ಲಿ ಹಿರಣ್ಯ ಕೇಶಿ ನದಿಗೆ ಮಹಾಪೂರ ಬಂದಾಗ ವರ್ಷದಲ್ಲಿ 5-6 ದಿವಸಗಳವರೆಗೆ ಮುಳುಗಿ ಸಂಚಾರ ಸ್ಥಗಿತಗೊಳ್ಳುತ್ತದೆ.

ಆ) ಈಗ ಇರುವ ಕೆಳಮಟ್ಟದ ಸೇತುವೆಯ ಎತ್ತರವನ್ನು ಹೆಚ್ಚಿಸಲು ಆಗುವುದಿಲ್ಲ. ಬೇರೆ ಎತ್ತರ ಮಟ್ಟದ ಸೇತುವೆಯನ್ನು ನಿರ್ಮಿಸುವ ವಿಚಾರ ಸರ್ಕಾರದ ಪರಿಶೀಲನೆಯಲ್ಲಿದೆ.

ಮಲಪ್ರಭಾ ಮತ್ತು ಘಟಪ್ರಭಾ ಯೋಜನೆಗಳಿಗೆ ನೀಡಿದ ಹಣದ ಬಗ್ಗೆ.

213 - ಶ್ರೀ ಉಮೇಶ ಕತ್ತಿ (ಹುಕ್ಕೇರಿ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಲಪ್ರಬಾ ಮತ್ತು ಘಟಪ್ರಭಾ ಯೋಜನೆಗೋಸ್ಕರ 1990-91ರಲ್ಲಿ ನೀಡಿದ ಬಜೆಟ್ ಹಣವೆಷ್ಟು?

ಆ) ಈ ಬಜೆಟ್ ಹಣದಲ್ಲಿ ಎಷ್ಟು ಖರ್ಚಾಗಿರುತ್ತದೆ, ಯಾವ ಸ್ಥಳಗಳಿಗಾಗಿ ಖರ್ಚು ಮಾಡಲಾಗಿದೆ ಹಾಗೂ ಎಷ್ಟು ಹಣ ಖರ್ಚು ಮಾಡಲಾಗಿದೆ (ಪ್ರತ್ಯೇಕ ವಿವರ ನೀಡುವುದು)

ಇ) ಕಾಡಾ ಕೆಲಸ ವಿಳಂಬಿಸುವುದಕ್ಕೆ ಕಾರಣಗಳೇನು?